ಧಾರವಾಡದಲ್ಲಿ ಉಚ್ಚ ನ್ಯಾಯಾಲಯದ ಪೂರ್ಣಪೀಠವನ್ನು ಸ್ಥಾಪಿಸುವ ಪ್ರಸ್ತಾವನೆಯನ್ನು ಸಚಿವಸಂಪುಟ ಹಾಗೂ ಉಭಯ ಸದನಗಳು ಅಂಗೀಕರಿಸಿದೆ. ಆದರೆ ಈ ದಿಶೆಯಲ್ಲಿ ಉಚ್ಚ ನ್ಯಾಯಾಲಯದ ಸಹಮತಿ ದೊರಕದೇ ಇರುವುದರಿಂದ ಉಚ್ಚ ನ್ಯಾಯಾಲಯದ ಪೀಠ ಸ್ಥಾಪನೆಗೆ ಅಡಚಣೆ ಉಂಟಾಗಿದೆ.

ಆ) ಕರ್ನಾಟಕ ಉಚ್ಚ ನ್ಯಾಯಲಯದ ಈಗಿನ ನಿಲುವನ್ನು ಮರು ಪರಿಶೀಲಿಸಿ ಸಹಮತಿಯನ್ನು ನೀಡಲು ಹಿಂದಿನ ಮುಖ್ಯ ನ್ಯಾಯಾಧೀಶರಾದ ಶ್ರೀ ಮಾಧವ ಲಕ್ಷ್ಣ್ ಪೆಂಡ್ಸ್ ಅವರನ್ನು ಕೋರಿದ್ದು ಈ ಪ್ರಸ್ತಾವನೆಯನ್ನು ಮರು ಪರಿಶೀಲಿಸುವುದಾಗಿ ಅವರು ತಿಳಿಸಿದ್ದರು. ನೂತನವಾಗಿ ಅಧಿಕಾರ ವಹಿಸಿಕೊಂಡಿರುವ ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾದ ಶ್ರೀ ರಾಮಪ್ರಕಾಶ್ ಸೇಠಿಯವರನ್ನು ಉಚ್ಚ ನ್ಯಾಯಾಲಯದ ಸಹಮತಿಯನ್ನು ಶೀಘ್ರವಾಗಿ ನೀಡಲು ಮತ್ತೆ ಕೋರಲಾಗಿದೆ. ಕರ್ನಾಟಕ ಉಚ್ಚ ನ್ಯಾಯಾಲಯದ ನಿರ್ಧಾರಕ್ಕಾಗಿ ಕಾಯಲಾಗುತ್ತಿದೆ.

ವಿಷಯ :- ಕುಂದಾಪುರ ತಾಲ್ಲೂಕಿನಲ್ಲಿ ಸಮುದ್ರದ ಕೊರೆತ.

ಚುಕ್ಕಿ ಗುರುತಿನ ಪ್ರಶ್ನೆ ಸಂಖ್ಯೆ 944 (1869)

ಶ್ರೀ ಪ್ರತಾಪ ಚಂದ್ರ ಶೆಟ್ಟಿ (ಕುಂದಾಪುರ) :- ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕುಂದಾಪುರ ತಾಲ್ಲೂಕು ಕೋಡಿಯಿಂದ ತೆಕ್ಕಟ್ಟೆವರೆಗೆ ಎಲ್ಲೆಲ್ಲಿ ಸಮುದ್ರ ಕೊರೆತ ಉಂಟಾಗಿದೆ?

ಆ) ಈ ಸಮುದ್ರ ಕೊರೆತ ತಡೆಯಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :-

ಅ) 1996 ರ ಸಾಲಿನಲ್ಲಿ ಈವರೆಗೆ ಕುಂದಾಪುರ ತಾಲ್ಲೂಕು ಕಸಬಾ ಕೋರಿಯಿಂದ ತೆಕ್ಕಟ್ಟೆವರೆಗೆ ಸಮುದ್ರ ಕೊರೆತ ಉಂಟಾಗಿಲ್ಲ. ಆದರೆ ಹಿಂದಿನ ವರ್ಷಗಳಲ್ಲಿ ಕಸಬಾಕೋಡಿಯಿಂದ ದಕ್ಷಿಣಕ್ಕೆ ಗೋಪಾಡಿ, ಬೀಜಾಡಿ, ಕೋರಾಡಿಗಳಲ್ಲಿ ಸಮುದ್ರ ಕೊರೆತ ಉಂಟಾಗಿತ್ತು.

ಅ) ಕಸಬಾ ಕೋಡಿಯಲ್ಲಿ ಸಮುದ್ರ ಕೊರೆತ ತಡೆಗೋಡೆಯನ್ನು ನಿರ್ಮಿಸಿ ಸಮುದ್ರ ಕೊರತ ತಡೆಗಟ್ಟಲು ಕ್ರಮ ಕೈಗೊಳ್ಳಲಾಗಿದೆ.

ವಿಷಯ :- ಐ.ಪಿ.ಎಸ್. ಅಧಿಕಾರಿಗಳ ಸಂಖ್ಯೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 946 (1868)

ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ (ಕುಂದಾಪುರ) :- ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1. ಕರ್ನಾಟಕದಲ್ಲಿರುವ ಐ.ಪಿ.ಎಸ್. ಅಧಿಕಾರಿಗಳ ಸಂಖ್ಯೆ ಎಷ್ಟು?

2. ಈಗ ಯಾವ ಯಾವ ಹುದ್ದೆಯಲ್ಲಿದ್ದಾರೆ ಮತ್ತು ಅವರು ಯಾವ ರಾಜ್ಯಕ್ಕೆ ಸೇರಿದವರಾಗಿದ್ದಾರೆ (ವಿವರ ನೀಡುವುದು)

3. ಯಾವ ವರ್ಷದಲ್ಲಿ ನಿವೃತ್ತಿ ಹೊಂದುತ್ತಾರೆ.

(ಹೆಸರು, ಹುದ್ದೆ, ರಾಜ್ಯ ಮತ್ತು ನಿವೃತ್ತಿ ಇಸವಿ ನೀಡುವುದು)

ಶ್ರೀ ಜೆ. ಹೆಚ್. ಪಟೀಲ್ (ಮುಖ್ಯ ಮಂತ್ರಿಗಳು) :-

ಳ 131.

ಅನುಬಂಧ -1 ರಲ್ಲಿ ವಿವರ ನೀಡಲಾಗಿದೆ.